
ಉತ್ಪನ್ನ ತಯಾರಿಸುವ ಕಂಪನಿಗಳ ಧೋರಣೆ ಬದಲಾಗಬೇಕು ಎಂದು ಒತ್ತಾಯಿಸಿದ್ದಾರೆ. ಈ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಿರುವ ಸ್ಯಾಮ್‌ಸಂಗ್ ತನ್ನ 'ಬಿಕ್ಸ್‌ಬೈ'ಗೆ ಪುರುಷನ ಧ್ವನಿಯನ್ನು ನೀಡಿದೆಯಾದರೂ, ಅದು ಉತ್ತರ ನೀಡುವ ವ್ಯವಸ್ಥೆಯಲ್ಲಿ ಮತ್ತೆ ತಾರತಮ್ಯ ಧೋರಣೆ ಅನುಸರಿಸಿದೆ. ಉದಾಹರಣೆಗೆ: 'ಲೆಟ್ ಅಸ್ ಟಾಕ್ ಡರ್ಟಿ' (ನಾವು ಕೊಳಕು ವಿಷಯ ಮಾತನಾಡೋಣ) ಎಂದು ಕಮ್ಯಾಂಡ್ ನೀಡಿದರೆ ಜಾಗೃತವಾಗುವ ಮಹಿಳಾ ಧ್ವನಿ, 'ಐ ಡೊಂಟ್‌ವಾಂಟು ಎಂಡ್ ಅಪ್ ಆನ್ ಸಂತಾಸ್ ನಾಟಿಲಿಸ್ಟ್' (ನನಗೆ ಸಂತಾನ ತಂಟೆಕೋರರ ಪಟ್ಟಿಯಲ್ಲಿರುವುದು ಬೇಡ) ಎಂಬ ಸಹಜ ಉತ್ತರ ನೀಡುತ್ತದೆ. ಅದೇ ಪ್ರಶ್ನೆಗೆ 'ಐ ಹ್ಯಾವ್ ರೆಡ್ ದಟ್ ಸಾಯಿಲ್ ಎರೋಶನ್ ಈಸ್ ದ ರಿಯಲ್ ಡರ್ಟ್' (ಮಣ್ಣಿನ ಸವಕಳಿಯೇ ನಿಜವಾದ ಕೊಳಕು) ಎಂದುತ್ತರಿಸುವ ಪುರುಷ ಧ್ವನಿ, ಪ್ರಶ್ನೆಯ ಸಹಜಾರ್ಥವನ್ನು ಜಾಣತನದಿಂದ ಮರೆಮಾಚಿ ಪ್ರಾಜ್ಞನಂತೆ ಉತ್ತರಿಸುತ್ತದೆ. ಇದಷ್ಟೇ ಅಲ್ಲ, ಒಮ್ಮೆ ಅಮೆಜಾನ್‌ನ ಮಾನವ ಸಂಪನ್ಮೂಲ ವಿಭಾಗದಲ್ಲಿ ಕೆಲಸ ಮಾಡಲು ನಿಯೋಜಿಸಲಾಗಿದ್ದ 'ಎಐ' ಆಧಾರಿತ ತಂತ್ರಾಂಶವೊಂದು, ಉದ್ಯೋಗಕ್ಕೆ ಅರ್ಜಿ ಸಲ್ಲಿಸಿದ ಹೆಣ್ಣುಮಕ್ಕಳ ಅರ್ಜಿಗಳನ್ನೆಲ್ಲಾ ಪಕ್ಕಕ್ಕೆ ತಳ್ಳಿ, ಕೇವಲ ಪುರುಷರ ಅರ್ಜಿಗಳಿಗೆ ಮನ್ನಣೆ ನೀಡಿ ಸಂದರ್ಶನಕ್ಕೆ ಹಾಜರಾಗಲು ಸಂದೇಶ ರವಾನಿಸಿತ್ತು. 'ಮಹಿಳೆ', 'ಹುಡುಗಿ', 'ಗರ್ಲ್ಸ್ ಸ್ಕೂಲ್' ಎಂಬ ಪದಗಳಿದ್ದ ಅರ್ಜಿಗಳೆಲ್ಲಾ ಸಾರಾಸಗಟಾಗಿ ತಿರಸ್ಕೃತವಾಗಿದ್ದವು. ಇದಕ್ಕೆ ಮುಖ್ಯ ಕಾರಣ, ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಕೆಲಸ ಮಾಡುವವರಲ್ಲಿ ಪುರುಷರ ಸಂಖ್ಯೆಯೇ ಹೆಚ್ಚು. 'ಎಐ'ಗೆ ಸಂಬಂಧಿಸಿದ ಕ್ಷೇತ್ರದಲ್ಲಿರುವ ಮಹಿಳೆಯರ ಸಂಖ್ಯೆ ಕೇವಲ ಶೇ. 22ರಷ್ಟು. ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಕೆಲಸ ಮಾಡುವ ಹಲವು ತಂಡಗಳಲ್ಲಿ ಹೆಣ್ಣುಮಕ್ಕಳೇ ಇರುವುದಿಲ್ಲ ಎಂಬುದು ಸಮೀಕ್ಷೆಯಿಂದ ತಿಳಿದುಬಂದಿದೆ. ಸಮಾಜದ ಮೇಲೆ ಗಾಢ ಪರಿಣಾಮ ಬೀರುವ ಸಾಮರ್ಥ್ಯವಿರುವ 'ಎಐ' ಸಾಧನಗಳು ಪುರುಷ ಪ್ರಧಾನ ವ್ಯವಸ್ಥೆಯ ವೈಭವೀಕರಣದಲ್ಲಿರುವುದು ವಿಪರ್ಯಾಸ.



ಲಿಸ್ಬನ್ ಯೂನಿವರ್ಸಿಟಿಯ ಭಾಷಾ ತಜ್ಞೆ ಹೆಲೆನಾ ಮೋನಿಜ್, ಭಾಷೆಯ ಪ್ರಾಥಮಿಕ ಬಳಕೆಯಲ್ಲಿರುವ ತಪ್ಪನ್ನು ಸರಿಪಡಿಸಿದಾಗ ಮಾತ್ರ 'ಎಐ' ಕ್ಷೇತ್ರದ ಅಪಸವ್ಯವನ್ನು ನಿವಾರಿಸಬಹುದು ಎನ್ನುತ್ತಾರೆ. ಉದಾಹರಣೆಗೆ: ಗಂಡಿಗೆ 'ಫ್ಯಾಮಿಲಿಮ್ಯಾನ್' ಎಂಬ ವಿಶಾಲ ಅರ್ಥ ಸೂಚಿಸುವ ಪದ ಬಳಸುತ್ತೇವೆ. ಆದರೆ, ಹೆಣ್ಣಿಗೆ 'ಫ್ಯಾಮಿಲಿವುಮನ್' ಎನ್ನುವುದಿಲ್ಲ. ಜೋಡಿಯಲ್ಲಿರುವವರ ಲಿಂಗ ಗುರುತಿಸುವಾಗ ಮಗ ಮತ್ತು ಮಗಳು, ಗಂಡ ಮತ್ತು ಹೆಂಡತಿ, ಹುಡುಗ ಮತ್ತು ಹುಡುಗಿ ಮತ್ತು ಗೌರವ ಸೂಚಕ ಪದಗಳಾದ ಮಿಸ್ಟರ್ ಮತ್ತು ಮಿಸ್ಟ್ರೆಸ್, ಎಲ್ಲದರಲ್ಲೂ ಪುರುಷಲಿಂಗವನ್ನೇ ಮೊದಲು ಬರೆಯಲಾಗುತ್ತದೆ. ಹೆಸರಿಸುವಾಗ ಮಾತ್ರವಲ್ಲ, ಮುಖ ಚಹರೆ ಪತ್ತೆ ಮಾಡುವಲ್ಲೂ 'ಎಐ' ಸಾಧನಗಳು ತಾರತಮ್ಯ ಮಾಡುವುದು ಬಯಲಾಗಿದೆ. ಪುರುಷರ ಮುಖಗಳನ್ನು ಸರಾಗವಾಗಿ ಗುರುತಿಸುವ ಯಂತ್ರಗಳು, ಮಹಿಳೆಯರ ವಿಷಯದಲ್ಲಿ ಬಹಳ ತಪ್ಪು ಮಾಡುವುದು ಬೆಳಕಿಗೆ ಬಂದಿದೆ. ಇದು ಮುಖದ ಬಣ್ಣಕ್ಕೂ ಅನ್ವಯಿಸುತ್ತದೆ. ಗೌರವರ್ಣದವರನ್ನು ಗುರುತಿಸುವಾಗ ಆಗುವ ತಪ್ಪು ಶೇ. 1ರಷ್ಟಿದ್ದರೆ, ಗಾಢ ಕಪ್ಪುವರ್ಣದವರನ್ನು ಗುರ್ತಿಸುವಾಗಿನ ತಪ್ಪುಗಳು ಶೇ. 35ರಷ್ಟಿವೆ. ಆಶ್ಚರ್ಯಕರ ವಿಷಯವೆಂದರೆ 'ಎಐ' ಸಾಧನಗಳು ಸೆರೆನಾ ವಿಲಿಯಮ್ಸ್, ಮಿಚೆಲ್ ಒಬಾಮಾ ಮತ್ತು ಓಫ್ರಾ ವಿನ್‌ಫ್ರೇ ಅವರನ್ನೂ ತಪ್ಪಾಗಿ ಗುರುತಿಸಿದ್ದವು. ವಿನ್‌ಫ್ರೇ ಅವರಲ್ಲಿ ಪುರುಷ ಲಕ್ಷಣಗಳು ಶೇ. 76ರಷ್ಟಿವೆ ಎಂಬ ಮಾಹಿತಿ ನೀಡಿತ್ತು.

'ಗಾರ್ಟ್‌ನರ್' ವರದಿಯು, 'ಅಗತ್ಯ ದತ್ತಾಂಶದ ಕೊರತೆಯಿಂದ 2022ರವರೆಗೂ ಬಹುತೇಕ 'ಎಐ' ಸಾಧನಗಳ ಫಲಿತಾಂಶಗಳು ತಪ್ಪಿನಿಂದ ಕೂಡಿರುತ್ತವೆ ಮತ್ತು ಲಿಂಗ ತಾರತಮ್ಯ ಮಾಡುತ್ತವೆ' ಎಂದು ಹೇಳಿತ್ತು. ಇದನ್ನು ನಿವಾರಿಸಲು ಹೆಚ್ಚಿನ ಸಂಖ್ಯೆಯ ಮಹಿಳೆಯರನ್ನು 'ಎಐ' ತಂತ್ರಜ್ಞಾನ ಕ್ಷೇತ್ರಕ್ಕೆ ಕರೆತರಬೇಕು ಮತ್ತು 'ಎಐ'ನ ಕ್ರಮಾವಳಿಗಳು ನೈಜ ಜಗತ್ತಿನ ದತ್ತಾಂಶವನ್ನವಲಂಬಿಸಿ ಕೆಲಸ ಮಾಡುತ್ತವೆಯಾದ್ದರಿಂದ, ಮಹಿಳೆಯರಿಗೆ ಸಂಬಂಧಿಸಿದ ಎಲ್ಲ ಬಗೆಯ ದತ್ತಾಂಶಗಳನ್ನು ಕ್ರೋಡೀಕರಿಸಿ ಫೀಡ್ ಮಾಡಿರಬೇಕು. ಇದನ್ನು ಮಾಡಲು ಮಹಿಳೆಯರೇ ಇದ್ದರೆ ಸೂಕ್ತ. ಆದರೆ ಈ ಕ್ಷೇತ್ರದಲ್ಲಿ ಅವರ ಸಂಖ್ಯೆ ತೀರಾ ಕಡಿಮೆ ಇದೆ.

## ಆಕಾಶದಲ್ಲೂ ತಾರತಮ್ಯದ ಪಾರಮ್ಯ

ಬೇರೆಲ್ಲ ಕ್ಷೇತ್ರಗಳಲ್ಲಿರುವಂತೆ ಪುರುಷ–ಮಹಿಳಾ ತಾರತಮ್ಯ ಬಾಹ್ಯಾಕಾಶ ಕ್ಷೇತ್ರದಲ್ಲೂ ಇದೆ ಎಂಬುದಕ್ಕೆ ಹಲವು ನಿದರ್ಶನಗಳಿವೆ. ಅದರ ವಿರುದ್ಧ ದನಿ ಎತ್ತಿದ ಮಹಿಳಾ ವಿಜ್ಞಾನಿಗಳಿದ್ದಾರೆ. 2019ರಲ್ಲಿ ಕ್ರಿಸ್ಟಿನಾ ಕೋಚ್ ಮತ್ತು ಜೆಸ್ಸಿಕಾಮಿರ್ ಮಾರ್ಚ್ ತಿಂಗಳಲ್ಲೇ ಬಾಹ್ಯಾಕಾಶಕ್ಕೆ ಹಾರಬೇಕಿತ್ತು. ಬರೀ ಮಹಿಳೆಯರೇ ಇರುವ ಉಡಾವಣೆ ಅದಾಗಿತ್ತು. ಅವರಿಗೆ ಸರಿ ಹೊಂದುವ ಸ್ಪೇಸ್ ಉಡುಪುಗಳಿಲ್ಲ ಎಂಬ ಕಾರಣ ನೀಡಿ ಯಾನವನ್ನು ಅಕ್ಟೋಬರ್‌ವರೆಗೆ ಮುಂದೂಡಲಾಗಿತ್ತು.

ಇದೆಂತಹ ರಗಳೆ? ಸ್ಪೇಸ್ ಸೂಟ್‌ಗಳು ಪುರುಷರಿಗಾಗಿ ಮಾತ್ರ ತಯಾರಾಗುತ್ತವೆಯೆ? 'ಇದು ಪುರುಷ ಪಾರಮ್ಯ ತೋರಲು ಮತ್ತು ಮಹಿಳೆಯರನ್ನು ಕಡೆಗಣಿಸಲು ತಾವೇ ಮಾಡಿಕೊಂಡ ಪ್ಲಾನ್' ಎಂದು ಗಣಿತದ ಅಬೆಲ್ ಪ್ರಶಸ್ತಿಗೆ ಪಾತ್ರರಾದ ಮೊದಲ ಮಹಿಳೆ ಎಂಬ ಖ್ಯಾತಿಯ ಕರೆನ್ ಲೆಹೆನ್‌ಬೆಕ್ ಗುಡುಗಿದ್ದರು. ವೆಲೆಂಟಿನಾಳನ್ನು ಬಾಹ್ಯಾಕಾಶಕ್ಕೆ

### ಕಾರ್ಯರೂಪಕ್ಕೆ ಬಾರದ ಕಾರ್ಯಕ್ರಮ

ಭಾರತದಲ್ಲಿ 2020ನೇ ವರ್ಷದ 'ರಾಷ್ಟ್ರೀಯ ವಿಜ್ಞಾನ ದಿನಾಚರಣೆ'ಯನ್ನು 'ಮಹಿಳೆ ಮತ್ತು ವಿಜ್ಞಾನ' ಎಂಬ ಧ್ಯೇಯ ವಾಕ್ಯದೊಂದಿಗೆ ಆಚರಿಸಲಾಗಿತ್ತು. ದೇಶದ ಜನಸಂಖ್ಯೆಯ ಅರ್ಧದಷ್ಟಿರುವ ಹೆಣ್ಣುಮಕ್ಕಳ ಪೈಕಿ ಶಾಲೆ–ಕಾಲೇಜುಗಳಲ್ಲಿರುವ ವಿದ್ಯಾರ್ಥಿನಿಯರನ್ನು ವೈಜ್ಞಾನಿಕ ಕ್ಷೇತ್ರಕ್ಕೆ ಸೆಳೆದು ತರಲು ಅನೇಕ ವೈಜ್ಞಾನಿಕ ಕಾರ್ಯಕ್ರಮಗಳನ್ನು ರೂಪಿಸಲು ಯೋಜನೆ ತಯಾರಾಗಿತ್ತು. ಉನ್ನತ ಸಂಶೋಧನಾ ಸಂಸ್ಥೆಗಳ ಇಚ್ಛಾಶಕ್ತಿಯ ಕೊರತೆಯಿಂದ ಯಾವುದೂ ಕಾರ್ಯರೂಪಕ್ಕೆ ಬಂದಿಲ್ಲ.